ಇಂದು ದಿನಾಂಕಃ18.12.2023 ರಂದು ಪಿಡಬ್ಲ್ಯೂಃ3 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲುಃ**</u> ಆರೋಪಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದಃ

1. ನಾನು ಕೆಲಸ ಮಾಡುವ ಸಂದರ್ಬದಲ್ಲಿ ನಮ್ಮ ಪಂಚಾಯಿತಿಯಲ್ಲಿ ಖಾತೆ ಇತ್ತು ಎಂದರೆ ಸರಿ. ನಾನು ದಾಖಲಾತಿ ನೀಡುವಾಗ ಆರೋಪಿಯ ಹೆಸರಿಗೆ ಇದ್ದ ಖಾತೆ ರದ್ದಾಗಿದೆ ಎಂದು ಸುಳ್ಳು ದಾಖಲಾತಿ ನೀಡಿಲ್ಲಾ ಎಂದರೆ ಸರಿಯಲ್ಲ. ದಿನಾಂಕಃ17.05.2011 ರಂದು ಕಾರ್ಯದರ್ಶಿ ಗಣೇಶರವರು ಕಾನೂನು ಬಾಹಿರವಾಗಿ ಕಚೇರಿಗೆ ತಂದು, ಖಾತೆ ಪುಸ್ತಕದಲ್ಲಿ ರದ್ದು ಮಾಡಿಸಿದ್ದಾರೆ ಆ ಕಾರಣದಿಂದ ಸರಿಪಡಿಸಬೇಕೆಂದು ತೀರ್ಮಾನ ಆಗಿದೆ ಎಂದರೆ ಸರಿ. ಆ ಪ್ರಕಾರ ಆರೋಪಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ನಂತರ ಕಂದಾಯ ಕಟ್ಟುಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಅದೇ ರೀತಿ ಚಾಸಾ-3 ರವರ ಹೆಸರಿಗೂ ಒಂದು ಖಾತೆ ಇದೆ ಎಂದರೆ ಸರಿ. ಆರೋಪಿಯ ಹೆಸರಿಗೆ 1995-96 ರಿಂದ ಅನಬೋಗದ ಖಾತೆ ಇತ್ತು ಎಂದರೆ ಸರಿ. ಅದಕ್ಕೆ ನಾವು ಕಂದಾಯ ಕಟ್ಟಿಸಿಕೊಳ್ಳುತ್ತಿದ್ದೇವೆ ಎಂದರೆ ಸರಿ.

2. ಚಾಸಾ-3 ರವರಿಗೆ ಮಂಡಲ ಪಂಚಾಯಿತಿ ಇದ್ದಾಗಲೇ ಖಾತೆ ಇತ್ತು, ಆ ನಂತರ ನಮ್ಮ ಪಂಚಾಯಿತಿಗೆ ವರ್ಗಾವಣೆಯಾಗಿರುತ್ತದೆ. ಚಾಸಾ-3 ರವರ ಹೆಸರಿಗೆ ಇದ್ದ ಖಾತೆಯ ನಂಬರ್ ಈಗ ನನಗೆ ನೆನಪಿಲ್ಲ. ಚಾಸಾ-3 ರವರಿ ಹೆಸರಿಗೆ 2011 ನೇ ಸಾಲಿನಲ್ಲಿ ಖಾತೆ ಮಾಡಲಾಗಿದೆ ಎಂದರೆ ಸಾಕ್ಷಿಯು ಮೊದಲೇ ಇತ್ತು ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಮುಂದುವರೆದು, 1994 ರಲ್ಲಿ ಪಂಚಾಯಿತಿ ಆಸ್ತಿತ್ವಕ್ಕೆ ಬಂದಾಗಲೇ ಖಾತೆ ಇತ್ತು ಎಂದು ನುಡಿಯುತ್ತಾರೆ. ಚಾಸಾ-3 ರವರ ಖಾತೆ ನ.508/2007-08. ಪಂಚಾಯಿತಿ ದಾಖಲಾತಿಗಳ ಪ್ರಕಾರ ಆರೋಪಿ ಮತ್ತು ಚಾಸಾ-3 ರವರ ಹೆಸರಿಗೆ ಪ್ರತ್ಯೇಕ ಖಾತೆಗಳು ಇವೆ ಎಂದರೆ ಸರಿ. ನಮ್ಮ ಪಂಚಾಯಿತಿ ದಾಖಲಾತಿಗಳಪ್ರಕಾರ ಚಾಸಾ-3 ರವರ ಹೆಸರಿಗೆ ಇದ್ದ ಖಾತೆಯನ್ನು ರದ್ದುಪಡಿಸಿ, ಆರೋಪಿಯ ಹೆಸರಿಗೆ ಖಾತೆ ಮಾಡಿಲ್ಲ. ನಿಪಿ-19 ರ ಪ್ರಕಾರ ಚಾಸಾ-1 ರವರ ಆಸ್ತಿಯ ಚಕ್ಕುಬಂದಿ ಹೊಂದಾಣಿಕೆಯಾಗದ ಕಾರಣ ಖಾತೆ ತಡೆ ಹಿಡಿಯಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಚಾಸಾ-3 ರವರಿಗೆ ಮಂಜೂರಾದ ಹಕ್ಕುಪತ್ರದ ಉತ್ತರದ ಚಕ್ಕು ಬಂದಿಯನ್ನು ರಸ್ತೆ ಎಂದ ಬದಲಾವಣೆ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-11 ರ ಪ್ರಕಾರ ಆಸ್ತಿಯ ಉತ್ತರದ ಚಕ್ಕುಬಂದಿ ಗೌಸ್ ಮೋದ್ದೀನ್ ಎಂದರೆ ಸರಿ. ಆ ರೀತಿ ಬದಲಾಯಿಸಲು ಯಾವುದೇ ತೀರ್ಮಾನ ಕಂಡುಬಂದಿಲ್ಲ ಎಂದರೆ ಸಾಕ್ಷಿಯು ಹಿಂದಿನ

ಕಾರ್ಯದರ್ಶಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಬದಲಾವಣೆ ಇರುವುದು ಕಂಡುಬಂದಿದೆ. ಆದರೆ ದಾಖಲೆಗಳು ಇಲ್ಲ ಎಂದು ನುಡಿಯುತ್ತಾರೆ. ನಿಪಿ-11 ದಾಖಲಾತಿಯನ್ನು ಚಾಸಾ-2 ನೀಡಿರುತ್ತಾರೆ. ನಿಪಿ-13 ಅನ್ನು ಚಾಸಾ-2 ರವರು ಸರ್ವೆ ಇಲಾಖೆಯಿಂದ ನಮಗೆ ತರಿಸಿಕೊಟ್ಟಿದ್ದಾರೆ. ನಂತರ ನಾವು ಪೊಲೀಸರಿಗೆ ಕೊಟ್ಟಿರುತ್ತೇವೆ. ನಿಪಿ-13 ರ ಬಗ್ಗೆ ನಮಗೆ ಮಾಹಿತಿ ಇಲ್ಲ ಎಂದರೆ ಸರಿ.

3. ನಿಪಿ-12 ರ ಬಗ್ಗೆಯೂ ಸಹ ನಮಗೆ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ-12 ರ ಪ್ರಕಾರ ಸಿರಿಲ್ ಮಿಸ್ಕಿತ್ ರವರಿಗೆ ಮಾಡಿದ ಸ್ಕೆಚ್ ನಲ್ಲಿ ಚಾಸಾ-3 ರವರ ಹೆಸರನ್ನು ಸೇರಿಸಿಕೊಳ್ಳಲಾಗಿದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-3 ರವರ ಹೆಸರಿಗೆ ಖಾತೆ ಮಾಡುವಾಗ ಪಶ್ಚಿಮದ ಗಡಿಯನ್ನೂ ಸಹ ಬದಲು ಮಾಡಿರುತ್ತೇವೆ ಎಂದರೆ ಸಾಕ್ಷಿಯು ಆ ಬಗ್ಗೆ ಮಾಹಿತಿ ಇಲ್ಲ, ದಾಖಲಾತಿ ಹೇಗೆ ಇದ್ದವು ಆ ರೀತಿ ಮಾಹಿತಿ ನೀಡಿದ್ದೇವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಇದು ಒಂದು ದಾಖಲಾತಿಯನ್ನು ತೋರಿಸಿ, ಅದನ್ನು ನಾನೇ ನೀಡಿದ್ದಾಗಿ ಎಂದು ಒಪ್ಪಿಕೊಂಡ ಕಾರಣ, ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲಾತಿಯ ದೃಡೀಕೃತಿ ಪ್ರತಿಯನ್ನು ತೋರಿಸಲಾಗಿ, ಒಪ್ಪಿಕೊಂಡ ಕಾರಣ, ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಅದರಲ್ಲಿ ಪಶ್ಚಿಮದ ಗಡಿಯನ್ನು ಮಂಜುನಾಥರವರ ನಿವೇಶನ ಎಂದು ಬರೆಯಲಾಗಿದೆ ಎಂದರೆ ಸರಿ. ಹಕ್ಕುಪತ್ರದ ಮೇಲೆ ಖಾತೆ ಮಾಡಬೇಕದರೆ ಅದನ್ನು ನೋಡಿ ಅದರಲ್ಲಿರುವ ಚಕ್ಕುಬಂದಿಯನ್ನು ನಮೂದಿಸಿ ಖಾತೆ ಮಾಡುತ್ತೇವೆ ಎಂದರೆ ಸರಿ. ಅದೇ ರಿತೀ ಅನುಬವದ ಖಾತೆ ಮಾಡುವಾಗ ಸ್ಥಳಕ್ಕೆ ಅಲ್ಲಿನ ಚಕ್ಕುಬಂದಿಯನ್ನು ನಮೂದಿಸಿ ಖಾತೆ ಮಾಡುತ್ತೇವೆ ಎಂದರೆ ಸರಿ.

4. ಪರವಾನಿಗೆ ನೀಡುವಾಗ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ನೀಡುತ್ತೇವೆ ಎಂದರೆ ಸರಿ. ನಿಪಿ-17 ರಂತೆ ನಮ್ಮ ಕಚೇರಿಯಿಂದ ಆರೋಪಿಗೆ ಹೆಸರಿಗೆ ಪರವಾನಿಗೆ ನೀಡಲಾಗಿದೆ ಎಂದರೆ ಸರಿ. ಅದನ್ನು 2010-11 ನೇ ಸಾಲಿನಲ್ಲಿ ನೀಡಲಾಗಿದೆ ಎಂದರೆ ಸರಿ. ಅದನ್ನು ಯಾವ ಖಾತೆಗೆ ನೀಡಲಾಗಿದೆ ಎಂದರೆ ಸಾಕ್ಷಿಯು ನನಗೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಒಬ್ಬ ವ್ಯಕ್ತಿ ಅನುಬೋಗದ ಆದಾರದ ಮೇಲೆ ಖಾತೆ ಹೊಂದಿದ್ದರೆ, ಕಂದಾಯವನ್ನು ಕಟ್ಟಿಸಿಕೊಳ್ಳಲಾಗುತ್ತದೆ ಎಂದರೆ ಸರಿ. 2012 ಕ್ಕಿಂತ ಒಬ್ಬ ವ್ಯಕ್ತಿ ಆಸ್ತಿಯ ಸ್ವಾಧೀನದಲ್ಲಿದ್ದರೆ ಆತನ ಅನುಬೋಗದ ಆದಾರದ ಮೇಲೆ ಖಾತೆ ಮತ್ತು ಬೇಡಿಕೆಯನ್ನು ದಾಖಲಿಸುತ್ತಿದ್ದೇವು ಎಂದು ನುಡಿಯುತ್ತಾರೆ. ಅದೇ ರೀತಿ ಹಕ್ಕುಪತ್ರ ಮತ್ತು ಬೇರೆ ದಾಖಲಾತಿಗಳ ಮೇಲೆ ಖಾತೆ ದಾಖಲು ಮಾಡುತ್ತೇವೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ ಒಂದು ದಾಖಲಾತಿಯನ್ನು ತೋರಿಸಿ, ಅದು ನಮ್ಮ ಕಚೇರಿಯಿಂದ ಮನೆಗಳ ಸಂಖ್ಯೆ ಮತ್ತು ಬೇಡಿಕೆ ಖಾತೆಗಳ ಸಂಖ್ಯೆ ಬಗ್ಗೆ ನೀಡಿರುವ ದಾಖಲಾತಿ ಎಂದರೆ ಸರಿ ಎಂದು ಒಪ್ಪಿಕೊಂಡ ಕಾರಣ, ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಯಾವುದೇ ಪಂಚಾಯಿತಿ ನಿರ್ಣಯಿಲ್ಲದೇ ಮತ್ತು ದಾಖಲಾತಿಗಳು ಇಲ್ಲದೇ ಚಾಸಾ-3 ರವರ ಖಾತೆಯ ಪಶ್ಚಿಮ ಮತ್ತು ಉತ್ತರದ ಗಡಿಗಳನ್ನು ಬದಲಾಯಿಸಲಾಗಿದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಬದಲಾಗದಿರುವ ಮೇಲ್ನೋಟ ಕಂಡುಬರುತ್ತದೆ ಎಂದರೆ ಸರಿ. ಅದಕ್ಕೆ ಯಾವುದೇ ಆಧಾರಗಳು ಸಹ ಇಲ್ಲ ಎಂದರೆ ಸರಿ.

5. ಶೇಖರ್ ಎಂಬುವವರಿಂದ ದೂರು ಬಂದಿಲ್ಲ. ನನ್ನ ಮೇಲೆಯೂ ಸಹ ಆರೋಪಿ ದಾವೆ ದಾಖಲಿಸಿದ್ದರು ಎಂದರೆ ಸರಿ. ಅದರಲ್ಲಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನೀಡಿದ್ದೇನೆ ಎಂದರೆ ಸರಿ. ಅದರಲ್ಲಿ ವಿವಾದಿತ ಭೂಮಿ ಪಂಚಾಯಿತಿ ರಸ್ತೆಯಿಂ ಗೌಸ ಮೋದಿನ್ ಮನೆಯವರೆಗೆ ಇದ್ದು, ಅಳತೆ ಜಾಸ್ತಿ ಇದೆ ಎಂದು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ಎಷ್ಟು ಅಳತೆ ಜಾಸ್ತಿ ಇದೆ ಎಂದು ನನಗೆ ಈಗ ನೆನಪಿಲ್ಲ. ಆರೋಪಿಯ ಹೆಸರಿಗೆ ಯಾವ ಖಾತೆಯಾಯಿತು ಮತ್ತು ಖಾತೆ ಮಾಡುವ ಕಾಲಕ್ಕೆ ಯಾರು ಅರ್ಜಿಯನ್ನು ನೀಡಿ, ಯಾವ ದಾಖಲಾತಿಗಳನ್ನು ನೀಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು, ಅವರೊಂದಿಗೆ ಶಾಮೀಲಾಗಿ, ಸುಳ್ಳು ದಾಖಾಲತಿ ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ